ಒ.ಎಸ್. ನಂಬರ್ಃ 114/2018
ಪಿಡಬ್ಲ್ಯೂಃ 1
ದಿನಾಂಕಃ 30.05.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಎಚ್ ವಕೀಲರಿಂದಃ</u>

ನಾನು ಹುಟ್ಟಿ ಬೆಳೆದ ಖಾಯಂ ನಿವಾಸ ಅನಿಗಾನಹಳ್ಳಿ . ವಾದ ಪತ್ರದ ಶಿರೋನಾಮೆಯಲ್ಲಿ ತೋರಿಸಿರುವ ನನ್ನ ವಿಳಾಸಕ್ಕೆ ಯಾವುದೇ ಪತ್ರವನ್ನು ಬರೆದರೆ ನನಗೆ ಬಂದು ತಲುಪುತ್ತದೆ. ನನಗೂ ಮತ್ತು ಅಂಚೆ ಇಲಾಖೆಯ ನಡುವೆ ಯಾವುದೇ ವ್ಯತ್ಯಾಸ ಇರುವುದಿಲ್ಲ . ಸಾಕ್ಷಿಗೆ ಒಂದು ಜಾರಿಯಾಗದ ಅಂಚೆ ಲಕೋಟೆಯನ್ನು ತೋರಿಸಿ ಅದರಲ್ಲಿ ಕಾಣಿಸಿರುವ ವಿಳಾಸ ನನ್ನದೇಯೇ ಎನ್ನಲಾಗಿ ಹೌದು ನುಡಿದಿದ್ದು ಸದರಿ ಅಂಚೆ ಲಕೋಟೆಯನ್ನು ನಿಡಿ 1 ಎಂದು ಗುರುತಿಸಲಾಯಿತು. ಸದರಿ ಅಂಚೆ ಲಕೋಟೆಯ ಷರಾದಲ್ಲಿ ಮೇಲೆ ಹೇಳಿದ ವಿಳಾಸ ವ್ಯಕ್ತಿಯು ಇರುವುದಿಲ್ಲ ಎಂದು ಉಲ್ಲೇಖಿಸಲಾಗಿದೆ ಎಂದರೆ ಸದರಿ ಅಂಚೆ ಬಂದಾಗ ನಾನು ಊರಿನಲ್ಲಿ ಇರಲಿಲ್ಲ ಎಂದು ಹೇಳುತ್ತಾರೆ. ನಿಡಿ 1 ನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಗಿ ಅದರಲ್ಲಿ ಕೇವಿಯಟ್ ನೋಟೀಸ್ ಇದ್ದು ಸದರಿ ನೋಟೀಸನ್ನು ನಿಡಿ 1 ಎ ಎಂದು ಗುರುತಿಸಲಾಯಿತು.

2021 ರಲ್ಲಿ ಊರಿನಲ್ಲಿ ನಾನು ಮಾತ್ರ ಇರಲಿಲ್ಲವೇ ಅಥವಾ ನನ್ನ ಕುಟುಂಬದ ಎಲ್ಲಾ ಸದಸ್ಯರು ಇರಲಿಲ್ಲವೇ ಅಂದರೆ ನಾನು ಮಾತ್ರ ಇರಲಿಲ್ಲ ಎನ್ನುತ್ತಾರೆ ಸಾಮಾನ್ಯವಾಗಿ ಮೇಲೆ ತೋರಿಸಿದ ವಿಳಾಸಕ್ಕ ಅಂಚೆ ಬಂದರೆ ನಾನು ಇಲ್ಲವೇ ನನ್ನ ಮನೆಯವರು ಅದನ್ನು ಪಡೆದುಕೊಳ್ಳುತ್ತೇವೇ ಅಂದರೆ ನಾನೇ ತೆಗೆದುಕೊಳ್ಳುತೇನೆ ಆ ಬಗ್ಗೆ ಮನೆಯವರಿಗೆ ತಿಳಿಸಿರುತ್ತೇನೆ. ನಾನಾಗಲೀ , ನನ್ನ ಸೋದರರು ಮತ್ತು ನನ್ನ ತಂದೆ ಮೇಲೆ ಹೇಳಿದ ವಿಳಾಸದಲ್ಲೇ ವಾಸ ಎಂದು ತೋರಿಸಲು ಯಾವುದಾದರೂ ದಾಖಲೆಗಳನ್ನು ನೀಡಿರುತ್ತೇವೆಯೇ ಅಂದರೆ ನೀಡಿರುತ್ತೇನೆ ಎನ್ನುತ್ತಾರೆ. ಸಾಕ್ಷಿ ಪರ ಗುರುತಿಸಿದ ಎಲ್ಲಾ ದಾಖಲೆಗಳನ್ನು ಸಾಕ್ಷಿಗೆ ನೀಡಿ ಅದರಲ್ಲಿ ವಿಳಾಸದ ಬಗ್ಗೆ ದಾಖಲೆ ಇದೆಯಾ ಎಂದು ಕೇಳಲಾಗಿ ನನ್ನ ತಂದೆಯ ಮರಣ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಮೇಲೆ ಹೇಳಿದ ವಿಳಾಸ ಇರುತ್ತದೆ ಎನ್ನುತ್ತಾರೆ. ನಾವು ಮೇಲೆ ಹೇಳಿದ ವಿಳಾಸದಲ್ಲಿ ನಮ್ಮ ತಾತನ ಕಾಲದಲ್ಲಿಯೂ ಇರುವ ಯಾವುದೇ ದಾಖಲೆಗಳನ್ನು ನಾನು ನೀಡಿರುವ ದಾಖಲೆಗಳ ಪ್ರಕಾರ ಇರುವುದಿಲ್ಲ ಎಂದರೆ ವಕೀಲರ ಬಳಿ ನೀಡಿರುತೆತೇನೆ ಎನ್ನುತ್ತಾರೆ. ನಾನು , ನನ್ನ ತಂದೆ ಅಶ್ವತಪ್ಪ ಮತ್ತು ನನ್ನ ತಾತ ಶೇಷಪ್ಪ ಎಲ್ಲರು ಬೆಂಗಳೂರಿನಲ್ಲಿ ಹುಟ್ಟಿ ಬೆಳೆದಿರುವುದು

ಅನಿಗಾನಹಳ್ಳಿ ಅಲ್ಲ ಅಂದರೆ ಸರಿಯಲ್ಲ . ನಾನು ಬೆಂಗಳೂರಿನಲ್ಲಿ ಖಾಯಂ ವಾಸ ಆಗಿ ನನ್ನ ಜೀವನೋಪಾಯಕ್ಕೆ ಚಾಲಕನ ಕೆಲಸ ಮಾಡುತೇನೆ ಎಂದರೆ ಹೋಗಿ ಬಂದು ಮಾಡುತೇನೆ ಎನ್ನುತ್ತಾರೆ. ನಾನು ಯಾರ್ಯಾರ ಮೇಲೆ ಈ ದಾವೆ ಹೂಡಿರುತೇನೆ ಎಂದರೆ 1 ರಿಂದ 7 ನೇ ಪ್ರತಿವಾದಿಯವರ ಮೇಲೆ ಎನ್ನುತ್ತಾರೆ. ಸರ್ಕಾರಿ ಅಧಿಕಾರಿಗಳನ್ನು ಪಕ್ಷಗಾರರನ್ನಾಗಿ ಮಾಡಿದ್ದು ಅವರಿಗೆ ದಾವಾ ಪೂರ್ವದಲ್ಲಿ ನೋಟೀಸ್ ಕೊಡಲಾಗಿದೆಯೇ ಅಂದರೆ ಇಲ್ಲ ಎನ್ನುತ್ತಾರೆ. ನಾನು ಯವೆಲ್ಲಾ ಸ್ವತ್ತುಗಳ ಮೇಲೆ ಈ ದಾವೆ ಹೂಡಿರುತೇನೆ ಎಂದು ಹೇಳಲು ಸಾಧ್ಯವೇ ಅಂದರೆ ಸರ್ವೆ ನಂಬರ್ 59 ಅದರ ವಿಸ್ತೀರ್ಣ 2 ಎಕರೆ 6 ಕಾಲ್ ಗುಂಟೆ , ಸರ್ವೆ ನಂಬರ್ 66 ರಲ್ಲಿ 6 ಗುಂಟೆ ಮತ್ತು ಸರ್ವೆ ನಂಬರ್ 88 ರಲ್ಲಿ 6 ಗುಂಟೆ ಎನ್ನುತ್ತಾರೆ. ಸರ್ವೆ ನಂಬರ್ 59 ರ ಚೆಕ್ಕು ಬಂದಿ ಹೇಳಲು ಸಾಧ್ಯವೇ ಅಂದರೆ ಪೂ- ಗೋಪಾಲಪ್ಪ ನವರ ಜಮೀನು , ಪ- ಕೋಲಾರ - ಬಂಗಾರಪೇಟೆ ಮುಖ್ಯ ರಸ್ತೆ , ಉ - ನಾರಾಯಣಪ್ಪ ಮತ್ತು ಗೋಪಾಲಪ್ಪನವರ ಜಮೀನು , ದ- ಅನಿಗಾನಹಳ್ಳಿ ಊರಿನ ರಸ್ತೆ ಎನ್ನುತ್ತಾರೆ. ಸರ್ವೆ ನಂಬರ್ 66 ರ ಚೆಕ್ಕು ಬಂದಿ ಪೂ- ಮುದುವತ್ತಿ ನಾರಾಯಣಪ್ಪನ ಗದ್ದೆ , ಪ- ಕೋಲಾರ -ಬಂಗಾರಪೇಟೆ ರಸ್ತೆ , ಉ-ಸರ್ಕಾರಿ ಜಾಗ , ದ-ಗೋಪಲಾಪ್ಪನ ಜಮೀನು , ಸರ್ವೆ ನಂಬರ್ 88 ರ ಚೆಕ್ಕು ಬಂದಿ ಪೂ- ಸತೀಶ್ ರವರ ಜಮೀನು , ಪ-ಕೋಲಾರ- -ಬಂಗಾರಪೇಟೆ ರಸ್ತೆ , ಉ- ಅಶ್ವತ್ತ ಕಟ್ಟೆ, ದ- ರಾಜಕಾಲುವೆ ಎನ್ನುತ್ತಾರೆ.

ಮೇಲೆ ಹೇಳಿದ ಸರ್ವೆ ನಂಬರ್ ಮತ್ತು ಚೆಕ್ಕು ಬಂದಿಗಳನ್ನು ಈ ದಾವೆ ಸಲ್ಲಿಸುವಾಗ ವಕೀಲರಿಗೆ ಹೇಳಿ ಬರೆಸಿರುತ್ತೀರಾ ಎಂದರೆ ಹೌದು ಎನ್ನುತ್ತಾರೆ. ಮೇಲೆ ಹೇಳಿದ ಚೆಕ್ಕು ಬಂದಿಗಳ ನಿಖರತೆ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ನೀಡಿರುತ್ತೀರಾ ಎಂದರೆ ಸರ್ಕಾರಿ ದಾಖಲೆಗಳನ್ನು ನೀಡಿರುತ್ತೇನೆ ಎನ್ನುತ್ತಾರೆ. ಸಾಕ್ಷಿಗೆ ಒಂದು ದಾಖಲೆ ತೋರಿಸಲಾಗಿ ಸಾಕ್ಷಿ ಸದರಿ ದಾಖಲೆಗಳನ್ನು ನೋಡಿ ನಿಪಿ 1 ರ ಪ್ರಕಾರ ಎನ್ನುತ್ತಾರೆ. ನಾನು ಹೇಳುತ್ತಿರುವ ಸರ್ವೆ ನಂಬರ್ ಗಳು ಮತ್ತು ಅವುಗಳಿಗೆ ಸಂಬಂಧಿಸಿದ ಚೆಕ್ಕು ಬಂದಿಗಳು ಯಾವುದೂ ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ . ಮೇಲೆ ಹೇಳಿದ ಮೂರೂ ಸರ್ವೆ ನಂಬರ್ ಗಳಿಗೆ ಮಾತ್ರ ಸಂಬಂದಿಸಿದಂತೆ ದಾವೆಯನ್ನು ನಾನು ಹೂಡಿರುತೇನೆಯೇ ಅಥವಾ ಇನ್ನೂ ಬೇರೆ ಆಸ್ತಿಗಳು ಇದೆಯಾ ಅಂದರೆ ಊರಿನ ಗೋಪಾಲಸ್ವಾಮಿ ದೇವಸ್ಥಾನವನ್ನೂ ಸೇರಿಸಿ ದಾವೆ ಹೂಡಿರುತೇನೆ ಎನ್ನುತ್ತಾರೆ. ಸದರಿ ದೇವಸ್ಥಾನ ಮುಜರಾಯಿ ಇಲಾಖೆಗೆ ಸೇರಿದೆಯೇ ಅಂದರೆ ದಾವೆ ಹೂಡಿದಾಗ ಸೇರಿಲ್ಲ ಎನ್ನುತ್ತಾರೆ. ಸದರಿ ದೇವಸ್ಥಾನ ಅನಿಗಾನಹಳ್ಳಿಯ ಗ್ರಾಮ ಠಾಣಾ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿ . ನನಗೆ ಕನ್ನಡ , ಇಂಗ್ಲೀಷ್ ಓದಲು ಬರುತ್ತದೆ.

ನಿಪಿ 5 ರಲ್ಲಿ ಯಾವ ಊರಿನ ಬಗ್ಗೆ ಉಲ್ಲೇಖ ಇದೆ ಅಂದರೆ ಹಾಲಿಗಾನಹಳ್ಳಿ ಎನ್ನುತ್ತಾರೆ. ನಿಪಿ 1 ರಲ್ಲಿ ಹಾಲಿಗಾನಹಳ್ಳಿ ಸೂಲಿಗುಂಟೆ ಹೋಬಳಿ ಬೇತಮಂಗಲ ತಾಲ್ಲೂಕು ಎಂದು ಮುಂದುವರೆದು ನುಡಿಯುತ್ತಾರೆ. ಅನಿಗಾನಹಳ್ಳಿಗ್ರಾಮ, ಕಸಬಾ ಹೋಬಳಿ, ಬಂಗಾರಪೇಟೆ ತಾಲ್ಲೂಕು ಎಂದರೆ ಸರಿ . ನಿಪಿ 1 ರಲ್ಲಿ ಇಂಟು ಗುರುತನ್ನು ಹಾಕಿ ಡಿಲಿಟೆಡ್ ಎಂದು ಬರೆಯಲಾಗಿದೆ ಎಂದರೆ ಸರಿಯಲ್ಲ ಎನ್ನುತ್ತಾರೆ. ನಿಪಿ 1 ರಲ್ಲಿ ಸರ್ವೆ ನಂಬರ್ 66 ಮತ್ತು 88 ರ ಬಗ್ಗೆ ಉಲ್ಲೇಖ ಇಲ್ಲ ಎಂದರೆ ಸರಿಯಲ್ಲ . ನಿಪಿ 1 ರಲ್ಲಿ ಮೇಲೆ ಹೇಳಿದ ಯಾವುದೇ ಸರ್ವೆ ನಂಬರ್ ಮತ್ತು ಅವುಗಳ ಚೆಕ್ಕು ಬಂದಿ ನಮೂದು ಇಲ್ಲ ಎಂದರೆ ಸರಿಯಲ್ಲ .

ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**(ರಹೀಮಾಲಿ ಎಮ್ ನದಾಫ್)**
**ಅಪರ ಹಿರಿಯ ಸಿ.ಜೆ ಮತ್ತು ಜೆಎಂಎಫ್ ಸಿ**
**ಕೆಜಿಎಫ್ (ಸಂಚಾರಿ ಪೀಠಃ ಬಂಗಾರಪೇಟೆ).**